ಅರ್ಥಮಾಡಿಕೊಳ್ಳಬೇಕು.

ಆ) ವಿಷಯ: ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ನಿಗದಿಪಡಿಸುವ ವಿಚಾರದಲ್ಲಿ ಸರ್ಕಾರ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿಯನ್ನು ಹಿಂತೆಗೆದುಕೊಳ್ಳುವ ಬಗ್ಗೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಅಧ್ಯಕ್ಷರೆ, ಸರ್ಕಾರದವರು ನಗರಸಭೆ ಮತ್ತು ಪುರಸಭೆಗಳ ಚುನಾವಣೆಗಳನ್ನು ನಡೆಸಿ ಈಗಾಗಲೇ 65 ದಿವಸಗಳಿಗೂ ಹೆಚ್ಚಾಗಿದೆ. ಮೇ 5ನೇ ತಾರೀಖಿನಂದು ಪ್ರಥಮ ಹಂತದ ಚುನಾವಣೆ ಜರುಗಿದ್ದರೆ ಜುಲೈ 8ನೇ ತಾರೀಖಿನಂದು ಎರಡನೆಯ ಹಂತದ ಚುನಾವಣೆಗಳು ನಡೆದು ಮುಗಿದಿವೆ. ನಮ್ಮಿಂದ ಅಧಿಕಾರ ತೆಗೆದುಕೊಂಡಿರುವ ಚುನಾಯಿತ ಪ್ರತಿನಿಧಿಗಳು ಮತ್ತು ಚುನಾವಣೆಗೆ ಪೂರ್ವದಲ್ಲಿ ಜನರಿಗೆ ಕೊಟ್ಟಿರುವ ಆಶ್ವಾಸನೆಗಳನ್ನು ಈಡೇರಿಸಬೇಕೆಂಬ ದೃಷ್ಟಿಯಿಂದ ತಮಗೆ ಯಾವಾಗ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನ ಸಿಗುತ್ತದೆಯೆಂಬ ಸಹಜ ಕಾತುರತೆಯಿಂದಿದ್ದಾರೆ. ಈ ಮಧ್ಯೆ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವ ಕುರಿತು ನನಗೆ ಗೊತ್ತಿರುವಂತೆ ಸರ್ಕಾರಕ್ಕೆ ಅಧಿಕಾರವಿಲ್ಲ. ಮತ್ತು ಆಡಳಿತಾಧಿಕಾರಿಗಳನ್ನು ನೇಮಿಸಿದ ಬಳಿಕವೂ ಅವರನ್ನು ಹೆಚ್ಚು ದಿವಸಗಳ ಕಾಲ ಮುಂದುವರೆಸುವುದಕ್ಕೂ ಸಾಧ್ಯವಿಲ್ಲ. ಈಗ ಚುನಾವಣೆಗಳನ್ನು ನಡೆಸಿರುವ ಮುಖ್ಯ ಉದ್ದೇಶ ಜನರಿಗೆ ನೇರವಾಗಿ ಅಧಿಕಾರ ಕೊಡುವ ಮೂಲಕ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಬೇಕೆಂಬುದೇ ಆಗಿದೆ. ದುರದೃಷ್ಟವಶಾತ್, ಮೇ ಐದನೇ ತಾರೀಖು ಆಯ್ತು ಅದಕ್ಕೂ ಮುಂಚಿತವಾಗಿ ನಡೆದಿರುವಂಥ ಚುನಾವಣೆಗಳಲ್ಲಿ ಮೀಸಲಾತಿಯನ್ನು ನಿಗದಿಪಡಿಸತಕ್ಕ ಥ ಸನ್ನಿವೇಶದಲ್ಲಿ ಸರ್ಕಾರ ಯಾವ್ಯಾವ ರೀತಿ ನಡೆದುಕೊಂಡಿತ್ತು ಎಂಬ ಬಗ್ಗೆ ನಾನು ಪ್ರಸ್ತಾಪಿಸಬಯಸುವುದಿಲ್ಲ. ಅದಂತೂ ಮೀಸಲಾತಿಯ ವ್ಯವಸ್ಥೆಗೆ ಒಂದು ರೀತಿಯ ಅಪಚಾರವೆಂದರೂ ತಪ್ಪಾಗುವುದಿಲ್ಲ. ಇದು ಒಂದು ಕಡೆಯಾದರೆ, ಮತ್ತೊಂದು ಕಡೆ ನಾವು ಕೋರ್ಟಿಗೆ ಹೋದಂಥ ಸಂದರ್ಭದಲ್ಲಿ 'ಈಗಾಗಲೇ ಈ ಕುರಿತ ಪ್ರಕ್ರಿಯೆ ಪ್ರಾರಂಭವಾಗಿರುವುದರಿಂದ ನಾವೇನೂ ಮಾಡುವುದಕ್ಕಾಗುವುದಿಲ್ಲ'ವೆಂದು ಕೋರ್ಟ್ ತಿಳಿಸಿದ್ದರಿಂದ ನಾವೂ ಸಹ ಸುಮ್ಮನಾದವು. ಇದಾದ ಬಳಿಕ ಎರಡನೇ ಹಂತದ ಚುನಾವಣೆಗಳು ನಡೆದಾಗ ನಾವೇ ಸ್ವತಃ ಅನೇಕ ಸಾರಿ ಮುಖ್ಯಮಂತ್ರಿಗಳ ಗಮನಕ್ಕೆ ತಂದೆವು. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಇದನ್ನು ಮಾಡುವುದಕ್ಕಾಗದಿರಬಹುದು. ಕೊನೇ ಪಕ್ಷ ನೀವಾದರೂ ಇದನ್ನು ಮಾಡಿ. ಚುನಾವಣಾ ವೆಚ್ಚದ ಮೇಲೆ ಕಡಿವಾಣ ಮತ್ತು ಯಾವ್ಯಾವ ವರ್ಗಗಳಿಗೆ

ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳನ್ನು ಎಷ್ಟು ತಿಂಗಳುಗಳ ಕಾಲ ಮೀಸಲಾತಿ ಇಡಬೇಕೆಂಬ ಬಗ್ಗೆ ಮುಂಚಿತವಾಗಿಯೇ ಘೋಷಣೆ ಮಾಡಿದರೆ ಅನುಕೂಲವಾಗುತ್ತದೆ. ಇದನ್ನು ನಾವು ಮಾಡಲಿಲ್ಲ ಹಾಗೆಂದು ನೀವೂ ಸಹ ಮಾಡಬಾರದೆಂದಲ್ಲ. ನೀವು ಮಾಡಬೇಕೆಂದು ನಾವು ಸಲಹೆಗಳನ್ನು ಕೊಟ್ಟಿದ್ದೇವೆ, ಆದರೂ ಸಹ ಮೀಸಲಾತಿ ನಿಗದಿಪಡಿಸಿಲ್ಲ. ಹೀಗಾಗಿ ಮೀಸಲಾತಿ ಬಗ್ಗೆ ಗೊಂದಲದ ಗೂಡನ್ನೇ ನಿರ್ಮಿಸಿದಿರಿ. ಇದರ ವಿರುದ್ಧ ಕೆಲವರು ಕೋರ್ಟಿಗೆ ಹೋದರೂ ಸಹ 'ಈ ರೀತಿ ಮಾಡಿರುವುದು ತಪ್ಪು, ಅಸಿಂಧು'ವೆಂದು ಕೋರ್ಟಿನಿಂದ ತೀರ್ಪು ಹೊರಬಂದಿತು. ನಾನು ಸರ್ಕಾರಕ್ಕಿರುವ ಹಕ್ಕಿನ ಕುರಿತು ಪ್ರಶ್ನಿಸುತ್ತಿಲ್ಲ. ಸರ್ಕಾರ ಡಿವಿಜನಲ್ ಬೆಂಚ್‌ಗೆ ಹೋಗಲು ಅಧಿಕಾರವಿದೆ, ಸರ್ವೋಚ್ಚ ನ್ಯಾಯಾಲಯಕ್ಕೂ ಹೋಗಲು ಅಧಿಕಾರವಿದೆ. ಇದರ ಬಗ್ಗೆ ನಾನು ಪ್ರಶ್ನಿಸುತ್ತಿಲ್ಲ ಅಥವಾ ಕೋರ್ಟ್ ನೀಡುವ ತೀರ್ಪಿನ ಕುರಿತು ನಾನು ಮಾತನಾಡುತ್ತಿಲ್ಲ. ಆದರೆ, ವಸ್ತುಸ್ಥಿತಿ ಏನಾಗಿದೆಯೆಂದರೆ, ಆಡಳಿತ ಪಕ್ಷದವರು ಎಲ್ಲಾ ಕಡೆಗಳಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ಗೆದ್ದಿದ್ದಾರೆ, ಅದು ಯಾವ ರೀತಿ ಗೆದ್ದಿದ್ದಾರೆಂಬುದು ಬೇರೆ ವಿಚಾರ. ಅಂತೂ ಗೆದ್ದಿದ್ದಾರೆ, ಜನರು ನಿಮಗೆ ಮತ ನೀಡಿದ್ದಾರೆ.

ಅಧ್ಯಕ್ಷರು: ಮಾನ್ಯ ಸಿಂಧ್ಯರವರೆ, ತಾವು ಪ್ರಸ್ತಾಪಿಸುತ್ತಿರುವ ವಿಷಯ ಈಗ ಕೋರ್ಟಿನ ಮುಂದಿರುವುದರಿಂದ ಆ ಕುರಿತು ಚರ್ಚಿಸಿದರೆ ಅದು ಸಬ್ ಜ್ಯುಡೀಸ್ ಆಗುತ್ತದೆ. ಇದನ್ನು ತಾವು ತಿಳಿದುಕೊಳ್ಳಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಸಬ್ ಜ್ಯುಡೀಸ್ ಅಂಶದ ಕುರಿತು ಪ್ರಸ್ತಾಪಿಸುತ್ತಿಲ್ಲ. ಕೋರ್ಟಿನಲ್ಲಿರುವ ಆದೇಶದ ಬಗ್ಗೆಯೂ ಚರ್ಚೆ ಮಾಡುತ್ತಿಲ್ಲ. ಕೆಲವು ವಿಚಾರಗಳನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನಷ್ಟೆ. ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸುವುದಕ್ಕೆ ಅಧಿಕಾರವಿದೆ. ಅದನ್ನು ನಾನು ಪ್ರಶ್ನಿಸುತ್ತಿಲ್ಲ ಅಥವಾ ಕೋರ್ಟ್ ಮುಂದಿರುವ ವಿಷಯದ ಕುರಿತೂ ಸಹ ಪ್ರಶ್ನಿಸುತ್ತಿಲ್ಲ.

ಅಧ್ಯಕ್ಷರು: ಕೋರ್ಟ್ ಮುಂದಿರುವ ವಿಚಾರವನ್ನು ತಾವು ಇಲ್ಲಿ ಪ್ರಸ್ತಾಪಿಸುವುದಕ್ಕಾಗುವುದಿಲ್ಲವೆಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಇದೇ ತರಹ ಚುನಾಯಿತ ಪ್ರತಿನಿಧಿಗಳು ಅಧಿಕಾರ ಇಲ್ಲದೆ ಎಷ್ಟು ದಿವಸ ಇರಬೇಕು? ಇದರ ಬದಲು ನಿಮಗಿರುವ ಒಂದು ದಾರಿ ಎಂದರೆ, ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿರುವ ಮೇಲ್ಮನವಿಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಎಲ್ಲಾ ಕಡೆಗಳಲ್ಲೂ ಬಹುಮತದಿಂದ ಗೆದ್ದುಬಂದಿರುವುದಾಗಿ ತಾವು ಹೇಳುತ್ತಿದ್ದು ಅಲ್ಲದೆ, ಜನರು ನಮಗೆ ಮತ್ತೊಮ್ಮೆ ಮನ್ನಣೆ ನೀಡಿದ್ದಾರೆಂದು ಹೇಳುತ್ತಿರಬೇಕಾದರೆ ಅದರ ಪ್ರಕಾರ ಮಾಡುವುದಕ್ಕೆ ನಿಮಗಿರುವ ತೊಂದರೆಯಾದರೂ ಏನು? ಕೆಲವು

ಕಡೆಗಳಲ್ಲಿ ವಿರೋಧ ಪಕ್ಷದವರು ಗೆದ್ದಿದ್ದರೂ ಅದನ್ನೂ ಸಹ ತಪ್ಪಿಸುವುದಕ್ಕೆ ತಾವು ಪ್ರಯತ್ನ ಮಾಡುತ್ತಿದ್ದೀರಿ.

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್. ಮಾನ್ಯ ಹಿರಿಯ ಸದಸ್ಯರಾಗಿರುವ ಸಿಂಧ್ಯರವರು ಚರ್ಚೆ ಮಾಡುತ್ತಿರುವ ವಿಷಯ ಸಬ್ ಜ್ಯುಡೀಸ್ ಆಗುತ್ತದೆಂದು ತಾವು ಪದೇ ಪದೇ ತಿಳಿಸುತ್ತಿದ್ದರೂ, ಉಚ್ಚ ನ್ಯಾಯಾಲಯದಲ್ಲಿ ಸರ್ಕಾರ ಸಲ್ಲಿಸಿರುವ ಮೇಲ್ಮನವಿಯನ್ನು ತಕ್ಷಣ ಹಿಂತೆಗೆದುಕೊಳ್ಳಬೇಕೆಂದು ಅವರು ತಮ್ಮ ವಾದವನ್ನು ಮುಂದುವರೆಸುತ್ತಿದ್ದು, ಇದು ಸಬ್ ಜ್ಯುಡೀಸ್ ಆಗಿರುವುದರಿಂದ ಸದನದಲ್ಲಿ ಈ ಬಗ್ಗೆ ಚರ್ಚಿಸುವ ಅವಶ್ಯಕತೆಯಿಲ್ಲವೆಂದೂ, ತಾವು ಈ ಕುರಿತು ಏನು ನಿರ್ಣಯ ಕೊಡುತ್ತೀರಿ ಅದಕ್ಕೆ ಬದ್ಧರಾಗಿ ಬೇರೆ ವಿಷಯವನ್ನು ಕೈಗತ್ತಿಕೊಳ್ಳಬೇಕೆಂದು ಕೋರುತ್ತೇನೆ.

SRI D.B.CHANDRE GOWDA: We are not discussing the issue before the Court. ಈಗಾಗಲೇ ಎರಡು ಹಂತಗಳಲ್ಲಿ ಚುನಾವಣೆಗಳು ಮುಗಿದಿದ್ದರೂ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ಮಾಡುವುದಕ್ಕೆ ಇರುವ ತೊಂದರೆ ಏನೆಂಬುದನ್ನು ಅವರು ಕೇಳುತ್ತಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಈ ಬಗ್ಗೆ ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರೇ ಹೇಳಲಿ. ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ನಾನು ಪ್ರಸ್ತಾಪಿಸುತ್ತಿರುವ ವಿಷಯ ಸಬ್ ಜ್ಯುಡೀಸ್ ಆಗುವುದಿಲ್ಲ. ಸರ್ಕಾರ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿಯನ್ನು ತಕ್ಷಣ ಹಿಂತೆಗೆದುಕೊಳ್ಳುವುದಕ್ಕೆ ಇರುವ ತೊಂದರೆ ಏನು? ಸಂಸದೀಯ ವ್ಯವಹಾರಗಳ ಸಚಿವರು ಸರಿಯಾಗಿಯೇ ಉತ್ತರ ಕೊಟ್ಟಿದ್ದಾರೆ. ನಾನು ಹೇಳುವುದೇನೆಂದರೆ, ಚುನಾಯಿತ ಪ್ರತಿನಿಧಿಗಳು ಚುನಾವಣೆಯಲ್ಲಿ ಗೆದ್ದು ಬಂದಿದ್ದು ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನ ನಿಗದಿಯಾಗದೆ ಚುನಾಯಿತ ಸಂಸ್ಥೆಗಳ ಆಡಳಿತ ಹೇಗೆ ನಡೆಯಬೇಕು? ಈಗ ಇದರ ಆಡಳಿತ ಯಾರ ಮರ್ಜಿಯಲ್ಲಿ ನಡೆಯುತ್ತಿದೆ? ನಾನು ಇದನ್ನು ಏಕೆ ಪ್ರಸ್ತಾಪಿಸುತ್ತಿದ್ದೇನೆಂದರೆ, ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಬಹಳಷ್ಟು ತೊಂದರೆಯುಂಟಾಗಿದೆ. ಅಲ್ಲಿ ಒಬ್ಬರು ಚೀಫ್ ಆಫೀಸರ್ ಇದ್ದು ಚುನಾಯಿತ ಪ್ರತಿನಿಧಿಗಳಾದ ನಾವೆಲ್ಲರೂ ಅಲ್ಲಿಗೆ ಹೋಗಿ ಕರೆದು ಕೇಳಬೇಕಾಗಿದೆ. ಮತ್ತೊಂದು ಮುಖ್ಯವಾಗಿರುವ ವಿಷಯವೇನೆಂದರೆ, ವಿರೋಧ ಪಕ್ಷದವರಾಗಲಿ, ಆಡಳಿತ ಪಕ್ಷದವರಾಗಲಿ ತೊಂದರೆ ಏನಾಗಿದೆಯೆಂದರೆ ಸದಸ್ಯರುಗಳನ್ನು ಹಿಡಿತದಲ್ಲಿಟ್ಟು ಕೊಳ್ಳುವುದು ಬಹಳ ಕಷ್ಟವಾಗುತ್ತಿದೆ. ಒಂದು ರೀತಿಯಲ್ಲಿ 'ಕುದುರೆ ವ್ಯವಹಾರ' ನಡೆಯುತ್ತಿದೆ. ನೀವೇಕೆ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ

ಸಲ್ಲಿಸಿದ್ದೀರಿ? ಅದನ್ನು ವಾಪಸ್ ತೆಗೆದುಕೊಳ್ಳಿ. ಒಂದಲ್ಲ ಎರಡಲ್ಲ ಮೂರು ಬಾರಿ ಸರ್ಕಾರದ ಮುಖಕ್ಕೆ ಮಂಗಳಾರತಿ ಎತ್ತಿ ಛೀಮಾರಿ ಹಾಕಿ ನೀವು ಮಾಡಿರುವುದು ತಪ್ಪು, ಮೀಸಲಾತಿಗೆ ನೀವು ಅಪಚಾರವೆಸಗಿದ್ದೀರಿ, ಮುಂತಾಗಿ ಹೇಳಿರುವಾಗಲೂ ನೀವು ಮೇಲ್ಮನವಿ ಸಲ್ಲಿಸಿದ್ದೀರಿ. ನೀವು ಸುಪ್ರೀಂ ಕೋರ್ಟಿಗೆ ಹೋಗಿ. ಚುನಾಯಿತ-ರಾಗಿರುವವರೆಲ್ಲರೂ ಸಾಕಷ್ಟು ದುಡ್ಡು ಖರ್ಚು ಮಾಡಿದ್ದಾರೆ. ನಾನು ಎಲೆಕ್ಷನ್ ಕಮೀಷನರ್ ಹತ್ತಿರ ಹೋಗಿ 'ಇದನ್ನೇನಾದರೂ ನಿಯಂತ್ರಿಸಲು ಸಾಧ್ಯವೇ?' ಎಂದು ಕೇಳಿದೆ. ಇದಕ್ಕೆ ಸಂಬಂಧಪಟ್ಟಂತೆ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಬಹಳ ಒಳ್ಳೆಯ ವ್ಯಂಗ್ಯ ಚಿತ್ರವನ್ನು ಪ್ರಕಟ ಮಾಡಿದ್ದಾರೆ. ಅದೇನೆಂದರೆ, ಅಲ್ಲಿ ಮತವನ್ನು ಹಾಕಿಬಂದುಬಿಡುವುದು, ಇಲ್ಲಿ ಬಂದ ತಕ್ಷಣ ಹತ್ತು ಕೆ.ಜಿ. ಅಕ್ಕಿಯನ್ನು ಕೊಡತಕ್ಕದ್ದು. ಆ ರೀತಿ ಮಾಡಿದವರು ಯಾವ ಪಕ್ಷದವರು ಎಂದು ಹೇಳಲು ಹೋದರೆ, ನೀವು ಆ ರೀತಿ ಮಾಡಿಲ್ಲವೇ ಎಂದು ನಮ್ಮ ಸ್ನೇಹಿತರು ಕೋಪ ಮಾಡಿಕೊಳ್ಳುತ್ತಾರೆ. ಆದ್ದರಿಂದ ಅದರ ಬಗ್ಗೆ ನಾನು ಪ್ರಸ್ತಾಪ ಮಾಡಲು ಹೋಗುತ್ತಿಲ್ಲ. ನಮ್ಮ ಅಭಿಪ್ರಾಯಗಳನ್ನು ಹೇಳಿಕೊಳ್ಳುವ ಸದನ ಇದಾಗಿದೆ. ನಾವೇನು ಇಲ್ಲಿ ಕುಸ್ತಿ ಮಾಡಲು ಆಗುತ್ತದೆಯೇ? ಎರಡು ಕೋಟಿ ಜನರು ಕೊಟ್ಟಿರುವ ತೀರ್ಪಿಗೆ ತಾವು ಅಪಚಾರವನ್ನು ಎಸಗುತ್ತಿದ್ದೀರಿ, ವಿಕೇಂದ್ರೀಕರಣದ ವ್ಯವಸ್ಥೆಗೆ ಅಪಚಾರ ಮಾಡುತ್ತಿದ್ದೀರಿ, ಗೆದ್ದಿರುವವರು ಯಾವಾಗ ಮೀಸಲಾತಿ ಆಗುತ್ತದೋ, ಯಾವ ಕ್ಯಾಟಗರಿ ಆಗುತ್ತದೋ ಎಂಬ ಬಗ್ಗೆ ಜಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ನನ್ನ ಕ್ಯಾಟಗರಿಯಾದರೆ ನಿನಗೆ ಇಷ್ಟು ಕೊಡುತ್ತೇನೆ, ನನ್ನ ಕ್ಯಾಟಗರಿಯಾಗದಿದ್ದರೆ ನೀನು ತಟಸ್ಥವಾಗಿರಲು ಇಷ್ಟು ಕೊಡುತ್ತೇನೆಂದು ಧರ್ಮಸ್ಥಳ, ತಿರುಪತಿ, ಬೊಂಬಾಯಿ, ಹೈದ್ರಾಬಾದ್ ಕಡೆಗಳಲ್ಲೆಲ್ಲಾ ತಿರುಗಾಡುತ್ತಿದ್ದಾರೆ. ಆದ್ದರಿಂದ ತಾವೇನು ಅಪೀಲ್ ಹೋಗಿದ್ದೀರಿ, ಅದನ್ನು ವಾಪಸ್ ಪಡೆದುಕೊಳ್ಳಿ. ಕಾನೂನು ಬದ್ಧವಾಗಿ ನಿಯಮಾವಳಿಯನ್ನು ಮಾಡಲು ತಮಗೆ ಅಡ್ಡಿ ಮಾಡಿದವರು ಯಾರು, ತಮ್ಮನ್ನು ಹಾಗೆ ಮಾಡಬೇಡಿ ಎಂದು ವಿರೋಧ ಪಕ್ಷದವರಾದ ನಾವೇನಾದರೂ ಒತ್ತಾಯ ಮಾಡಿದ್ದೇವೆಯೇ, ನಮಗೆ ಬಹುಮತವಿದೆಯೆಂದು ಹೇಳಿಕೊಳ್ಳುವವರು ಇದನ್ನೇಕೆ 65 ದಿವಸಗಳಿಂದ ತಡೆದಿದ್ದೀರಿ? ಆದ್ದರಿಂದ ತಾವು ಮೀಸಲಾತಿಗೆ ಅಪಚಾರವನ್ನು ಮಾಡಲು ಹೋಗಬೇಡಿ, ತಮ್ಮ ಪಕ್ಷಕ್ಕೆ ಮೆಜಾರಿಟಿ ಬಂದಿದೆಯೆಂದು ಹೇಳಿರಬೇಕಾಗಿದ್ದರೆ ಯಾರನ್ನೋ ತೃಪ್ತಿಪಡಿಸಲು ಏಕೆ ವಿಳಂಬ ಮಾಡುತ್ತಿದ್ದೀರಾ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಹೇಗೆ ಮಾಡಬೇಕೆಂದು ತಾವೇ ಹೇಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಪೌರಾಡಳಿತ ಇಲಾಖೆಯ ಬೇಡಿಕೆಯ ವಿಚಾರ ಚರ್ಚೆಗೆ ಬಂದಂಥ ಸಂದರ್ಭದಲ್ಲಿ ಸಮಯವಿದ್ದರೆ ಹೇಗೆ ಮಾಡಬೇಕು ಎಂಬ ಬಗ್ಗೆ ಹೇಳುತ್ತೇನೆ. ನಮ್ಮ ಕಾಲದಲ್ಲೇನೂ ಮಾಡಲು ಆಗಲಿಲ್ಲ ಅದನ್ನು ತಾವು

ಮಾಡಬಹುದು, ಅದನ್ನು ಮಾಡಲು ನಾವು ಸಲಹೆಗಳನ್ನು ಕೊಡುತ್ತೇವೆ. ತಕ್ಷಣಕ್ಕೆ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಮೇಲ್ಮನವಿಯನ್ನು ವಾಪಸ್ ತೆಗೆದುಕೊಂಡು ಕಳಗೆ ಏನು ತೀರ್ಮಾನವನ್ನು ಕೊಟ್ಟಿದ್ದಾರೆ ಅದರ ಪ್ರಕಾರ ಮೀಸಲಾತಿಯನ್ನು ಪ್ರಕಟ ಮಾಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಜಗದೀಶ್‌ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರೇನು ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ ಅದಕ್ಕೆ ನಾನೂ ಸ್ಪಂದಿಸುತ್ತೇನೆ. ಚುನಾವಣೆಯಾಗಿ ಎರಡುತಿಂಗಳುಗಳಾದರೂ ಅವರು ಅಧಿಕಾರವನ್ನು ತೆಗೆದುಕೊಂಡಿಲ್ಲ. ನಾವು ಹೊಸದಾಗಿ ಶಾಸಕರಾದ ಸಂದರ್ಭದಲ್ಲಿ ಬಹುಮತವಿರುವವರು ಮುಖ್ಯ ಮಂತ್ರಿಯವರು, ಸಚಿವರುಗಳು ಮತ್ತು ಶಾಸಕರಾದ ತಾವು ಎರಡು ದಿವಸಗಳಲ್ಲಿ ಪ್ರಮಾಣವಚನ ಸ್ವೀಕಾರ ಮಾಡುತ್ತೇವೆ. ಆದರೆ ಚುನಾವಣೆಯಾಗಿ ಎರಡು ತಿಂಗಳುಗಳಾದರೂ ಅವರು ಅಧಿಕಾರವನ್ನು ತೆಗೆದುಕೊಂಡಿಲ್ಲ. ಇದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲೇನು ತೀರ್ಮಾನವಾಯಿತು ಅದಕ್ಕೆ ತಡೆಯಾಜ್ಞೆ ಕೇಳಿ ತಾವು ಅಪೀಲ್ ಹಾಕಿದಿರಿ. ಅದಕ್ಕೆ ಇದುವರೆಗೆ ತಡೆಯಾಜ್ಞೆ ಸಿಗಲಿಲ್ಲ. ಆ ರೀತಿ ತಡೆಯಾಜ್ಞೆ ಸಿಕ್ಕಲಿಲ್ಲವೆಂದ ಮೇಲೆ ಅದಕ್ಕೆ ಹೈಕೋರ್ಟ್‌ನವರು ಯಾವ ರೀತಿಯಲ್ಲಿ ಸ್ಪಂದಿಸಿದ್ದಾರೆಂಬುದನ್ನು ತಾವು ತಿಳಿದುಕೊಳ್ಳಬಹುದು. ಆದ್ದರಿಂದ ತಾವೇನು ಅಪೀಲ್ ಹಾಕಿದ್ದೀರಿ ಅದನ್ನು ವಾಪಸ್ ಪಡೆದು ತಕ್ಷಣವೇ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆಗೆ ದಿನಾಂಕಗಳನ್ನು ನಿಗದಿ ಮಾಡಿ. ಹೈಕೋರ್ಟ್‌ನವರೇ ಕೆಲವೊಂದು ನಿರ್ದೇಶನಗಳನ್ನು ಕೊಟ್ಟಿದ್ದಾರೆ. ಅದನ್ನು ಒಳಗೊಂಡಂತೆ ನಿಯಮಾವಳಿಯನ್ನು ರಚನೆ ಮಾಡಿ ಹೈಕೋರ್ಟ್‌ಗೆ ಸಲ್ಲಿಸಿ ತಕ್ಷಣವೇ ಆ ಚುನಾವಣೆಯನ್ನು ಮಾಡಬೇಕು. ಮತ್ತೊಂದು ವಿಚಾರವೇನೆಂದರೆ, ಚುನಾವಣೆಯಾಗುವ ಮೊದಲೇ ಅಧ್ಯಕ್ಷರ, ಉಪಾಧ್ಯಕ್ಷರ ಮೀಸಲಾತಿಯನ್ನು ನಿಗದಿ ಮಾಡಿಬಿಟ್ಟರೆ ಈ ಎಲ್ಲಾ ಸಮಸ್ಯೆಗಳು ಬರುವುದಿಲ್ಲ. ಹಿಂದಿನ ನಾಲ್ಕೈದು ವರ್ಷಗಳ ವರ್ಗೀಕರಣವನ್ನು ತೆಗೆದುಕೊಂಡು ಚುನಾವಣೆಗೂ ಮೊದಲೇ ಮೀಸಲಾತಿಯನ್ನು ನಿಗದಿ ಮಾಡಿದರೆ ಒಳ್ಳೆಯದು.

+ ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯರವರು ಪ್ರಮುಖವಾದ ಪ್ರಶ್ನೆಯನ್ನು ಸದನದಲ್ಲಿ ತಂದಿದ್ದಾರೆ. ಅಧಿಕಾರ ಜನರ ಕೈಯಲ್ಲಿರಬೇಕು, I ಚುನಾವಣೆಯ ಮೂಲಕ ಅಧಿಕಾರವನ್ನು ಹಂಚಿಕೊಡುವ ಕೆಲಸವನ್ನು ಚುನಾವಣಾ ಆಯೋಗ ಮಾಡಬೇಕು, ಜನಪ್ರತಿನಿಧಿಗಳು ಕೆಲಸ ಮಾಡಬೇಕು ಎಂಬ ಸಿದ್ಧಾಂತಕ್ಕೆ ನಾವೆಲ್ಲರೂ ಒಗ್ಗಿಕೊಂಡಿರುವವರಾಗಿದ್ದೇವೆ. ಇದರ ಬಗ್ಗೆ ನಾವು ಇವತ್ತು ವಿಶೇಷವಾಗಿ ಒಂದು ದೃಷ್ಟಿಯಿಂದ ಶೂನ್ಯದಲ್ಲಿದ್ದೇವೆ.

ರಿಟ್ ಪಿಟಿಷನ್ ನಂಬರ್ 21815, 2001ಕ್ಕೆ ಒಂದು ಕೇಸನ್ನು ದಾಖಲು ಮಾಡಿ 15:6:2001ಕ್ಕೆ ಒಂದು ತೀರ್ಪು ಬಂದಿದೆ. ಆ ತೀರ್ಪಿನಲ್ಲಿ ಸೆಕ್ಷನ್ 13, ಸಬ್‌ಸೆಕ್ಷನ್ 6ರಲ್ಲಿ ನಾವೇನು ಮೀಸಲಾತಿ ನಿಯಮ ಮಾಡಿಕೊಂಡಿದ್ದೇವೆ, ಹಾಲಿ ನಿಯಮವೇನಿದ ಅದನ್ನು ರದ್ದುಪಡಿಸಿದ್ದಾರೆ. ಆ ರೀತಿ ತೀರ್ಪು ಕೊಟ್ಟರುವಾಗ ನಾವು ಯಾವ ರೀತಿಯಲ್ಲಿ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆ ಮಾಡಬೇಕು ಎಂಬ ಪ್ರಶ್ನೆ ಬಂದಿದೆ. ನಿಯಮವನ್ನು ರದ್ದು ಮಾಡಿದಯೇ ಮೀಸಲಾತಿಯಲ್ಲಿ ತಪ್ಪಾಗಿದೆಯೆಂದು ಹೇಳಿದ್ದರೆ ಯಾವುದೇ ಸರ್ಕಾರವಾಗಲಿ, ಸಂಬಂಧಪಟ್ಟ ಇಲಾಖೆಯವರಾಗಲಿ ಚುನಾವಣೆಯನ್ನು ಮಾಡಬಹುದು. ಸಬ್ ಸೆಕ್ಷನ್ 6ನ್ನು ರದ್ದು ಮಾಡಿದಮೇಲೆ, if I were to bring it to the notice of the House,

"The office of the President and the Vice-President of the Muncipal Councils and the Town Panchayats of the State..... subsequent terms be determined by the Government from time to time taking into consideration such factors as deemed fit "

ಆದ್ದರಿಂದ ನಾವೇನೋ ಮಾಡಿದ್ದೇವೆ ಅದು ತಪ್ಪಾಗಿದೆ ಅದನ್ನು ಸರಿಪಡಿಸಿಕೊಳ್ಳಿ ಎಂದು ಮಾತ್ರ ಹೇಳಿದ್ದರೆ ಮುಂದುವರೆಯಬಹುದಿತ್ತು. ಆದರೆ ಸಬ್ ಸೆಕ್ಷನ್ 6ನ್ನೇ ಡಿಲೀಟ್ ಮಾಡಿದ್ದಾರೆ. ಹೀಗಿರುವಾಗ ನಾವೇನು ಮಾಡಬೇಕು? ಆದ್ದರಿಂದಲೇ ನಾವು ಶೂನ್ಯದಲ್ಲಿದ್ದೇವೆ ಎಂದು ಹೇಳಿದ್ದು. ಈ ಶೂನ್ಯದಿಂದ ಮತ್ತೆ ಸರಿದಾರಿಗೆ ತರುವ ಕೆಲಸ ಕೋರ್ಟ್‌ನಿಂದ ಆಗಬೇಕು. ಆದ್ದರಿಂದ ನಾವು ಅಪೀಲ್ ಹೋಗಿದ್ದೇವೆ. Appeal is being heard to-day by the Division Bench. The Advocate-General himself is arguing the case. ಇವತ್ತು ಇದರ ಬಗ್ಗೆ ಏನಾದರೂ ಏಚಾರ ಹೊರಗಡೆ ಬರಬಹುದು. ಅದು ಬಾರದೆ ಚುನಾವಣೆ ಮಾಡಿ ಎಂದರೆ ಹೇಗಾಗುತ್ತದೆ? ಅಪೀಲನ್ನು ವಾಪಸ್ ಪಡೆದುಕೊಳ್ಳಿ ಎಂದು ವಿರೋಧ ಪಕ್ಷದ ನಾಯಕರು ಸಲಹೆ ಕೊಟ್ಟರು. ಅಪೀಲ್ ವಾಪಸ್ ಪಡೆಯುವ ಬಗ್ಗೆಯೂ ನಾವು ಯೋಚನೆ ಮಾಡಿದೆವು. ಹಾಗೆ ಮಾಡಿದರೂ ನಾವು ಶೂನ್ಯದಿಂದ ಹೊರಬರಲು ಆಗುವುದಿಲ್ಲ. ಏಕೆಂದರೆ ಸಬ್ ಸೆಕ್ಷನ್ 6ನ್ನು ನಿಯಮದಿಂದ ರಿಮೂವ್ ಮಾಡಿ ತೀರ್ಪು ನೀಡಿದ್ದಾರೆ. ಅಪೀಲನ್ನು ವಾಪಸ್ ಪಡೆಯುವ ತಮ್ಮ ಸಲಹೆಯನ್ನು ಒಪ್ಪಿಕೊಂಡು ವಾಪಸ್ ಪಡೆದರೆ ಅನಂತರ ನಾವು ಏನು ಮಾಡಬೇಕು? ಮುಂದೆ ಏನು? I agree with your suggestion. I will withdraw. What next? The Court should say

'Either you frame the rules in accordance with the Act that you have provided for or frame the reservation policty.' ಅಥವಾ ಮೀಸಲಾತಿ ಪಾಲಿಸಿಯನ್ನು ರಚನೆ ಮಾಡಿ ಎಂದು ಹೇಳಬೇಕು, ಆದರೆ ಅವೆರಡೂ ಇಲ್ಲದಿರುವುದರಿಂದ ನಾವು ಅಪೀಲ್ ಹಾಕಿದ್ದೇವೆ. ಅದರ ಹಿಯರಿಂಗ್ ಇವತ್ತು ನಡೆಯುತ್ತಿದೆ. I am hopeful of getting some relief from the court. So, ಅಪೀಲ್ ವಾಪಸ್ ಪಡೆಯುವ ಸಲಹೆಯನ್ನು ನಾವು ಈಗಾಗಲೇ ಪರಿಶೀಲನೆ ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅಪೀಲ್ ಹಾಕಿದ್ದು ನೀವೇ?

ಅಧ್ಯಕ್ಷರು: ಅಪೀಲ್ ವಾಪಸ್ ಪಡೆದರೆ ಏನೂ ಪ್ರಯೋಜನವಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಡಿ.ಬಿ.ಚಂದ್ರೆಗೌಡ: ನಾವು ಅಪೀಲ್ ಹಾಕಲೇ ಬೇಕಾಯಿತು, ಏಕೆಂದರೆ ಅವರು ಸಬ್‌ಸೆಕ್ಷನ್ 6ನ್ನು ಡಿಲೀಟ್ ಮಾಡಿದ್ದಾರೆ.

ಅಧ್ಯಕ್ಷರು: ಆ ರೀತಿ ಆಗಿರುವುದರಿಂದ ನಾವು ಶೂನ್ಯದಲ್ಲಿದ್ದೇವೆ. Even if you withdraw, we will be in zero.

SRI P.G.R.SINDHIA: It is only Zero Hour. There is no zero there.

ಶ್ರೀ ಡಿ.ಬಿ.ಚಂದ್ರೇಗೌಡ: ಇಲ್ಲಿಗೆ ಆಡಳಿತಾಧಿಕಾರಿಗಳನ್ನು ಹಾಕಬೇಕು ಎಂಬ ಯೋಚನೆ ಸರ್ಕಾರಕ್ಕಿದೆಯೆಂಬ ಹೊಸ ಸಲಹೆಯನ್ನು ಮಾನ್ಯ ಸಿಂಧ್ಯಾರವರು ಕಪೋಲಕಲ್ಪಿತವಾಗಿ ಹೇಳಿದ್ದಾರೆ. ನಮಗೆ ಹೊಸ ಯೋಚನೆಯ ಬಗ್ಗೆ ತಿಳಿಸಿರುತ್ತಾರೆ. ಆಡಳಿತಾಧಿಕಾರಿಗಳನ್ನು ಹಾಕುವ ಆಲೋಚನೆ ನಮಗೆ ಇದುವರೆಗೆ ಇರಲಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಈಗಾಗಲೇ ಆಡಳಿತಾಧಿಕಾರಿಗಳು ಇದ್ದಾರಲ್ಲಾ, ಹೀಗಿರುವಾಗ ಕಪೋಲಕಲ್ಪಿತವೆಲ್ಲಿ ಬಂತು? ತಾವು ಚುನಾವಣೆ ಮಾಡಿ ಜನಪ್ರತಿನಿಧಿಗಳಿಗೆ ಅಧಿಕಾರವನ್ನು ಕೊಡುವ ಉದ್ದೇಶ ಸಫಲವಾಗಿಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ಚುನಾವಣೆ ಮಾಡಬಾರದು ಎಂಬುದಲ್ಲ, ವಿರೋಧ ಪಕ್ಷದ ನಾಯಕರು ಚುನಾವಣೆ ಮಾಡುವ ಮೊದಲೇ ಮೀಸಲಾತಿ ನಿಗದಿ ಮಾಡಿದರೆ ಈ ಸಮಸ್ಯೆ ಬರುವುದಿಲ್ಲವೆಂದು ತಿಳಿಸಿದರು. ಇದು ಒಳ್ಳೆಯ ಸಲಹೆ, ಇದರ ಬಗ್ಗೆ ಮುಂದೆ ಚರ್ಚೆ ಮಾಡೋಣ. ಅವರುಗಳು ನೀಡಿರುವ ಸಲಹೆಗಳನ್ನೆಲ್ಲಾ

ಗಮನಿಸಿದ್ದೇನೆ. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಚುನಾವಣೆಗಳನ್ನು ಮಾಡಲು ಸರ್ಕಾರ ತಯಾರಾಗಿದೆ. ಯಾವ ಕಾರಣದಿಂದಲೂ ಚುನಾಯಿತ ಪ್ರತಿನಿಧಿಗಳು ಬಂದ ಮೇಲೆ ಕಛೇರಿಯನ್ನು ಖಾಲಿ ಇಡಲು ನಾವು ಸಿದ್ಧರಿಲ್ಲ. ಆದರೆ ಕೋರ್ಟ್ ಆದೇಶ ಬೇಕಾಗುತ್ತದೆ.

೧೨.೪೦ ಪಿಎಂ

ಆಫೀಸ್ ವೇಕೆಂಟ್ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ but for the court order. I am not trying to blame the Court. They might have done in the best of their wisdoms. Sometimes, there are untold miseries which may crop up after certain events. Probably we may get some order to-day. ಆದುದರಿಂದ ಈಗ ಅಂಥಾದ್ದು ಆಗಿದೆ. ಈ ಪ್ರಸಂಗದಲ್ಲಿ ಸರ್ಕಾರ ಏನು ಮಾಡಬೇಕೋ ಅದನ್ನೆಲ್ಲಾ ಮಾಡಿದ್ದೇವೆ. This is all that I submit.

+ ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಮಾನ್ಯ ಅಧ್ಯಕ್ಷರೇ, ಈಗ ಏನೊಂದು ಮೀಸಲಾತಿಯನ್ನು ಸರ್ಕಾರ ನಿಗದಿ ಮಾಡಿದೆಯೋ, ಆ ಮೀಸಲಾತಿಯನ್ನು ನಿಗದಿ ಮಾಡಬೇಕಾದರೆ ಅವರು ಹೇಳಿದ ಹಾಗೆ ಯಾವುದೇ ರೂಲ್ಸ್‌ನ ಅಡಿಯಲ್ಲಿ ಮೀಸಲಾತಿಯನ್ನು ನಿಗದಿ ಮಾಡಿರಲಿಲ್ಲ. ಆ್ಯಕ್ಟ್ ಆದಮೇಲೆ ರೂಲ್ಸ್ ಅನ್ನು ಮಾಡಿ, ಈ ರೂಲ್ಸ್ ಅಥವಾ ಗೈಡ್‌ಲೈನ್ಸ್ ಪ್ರಕಾರ ಮೀಸಲಾತಿಯನ್ನು ನಿಗದಿಗೊಳಿಸುತ್ತೇವೆ ಎಂದು ಮಾಡಿ, ಆದರ ಪ್ರಕಾರ ನಡೆದುಕೊಂಡಿದ್ದರೆ ಸಿಂಗಲ್ ಬೆಂಚ್ ಇದನ್ನು ಏನೂ ಪ್ರಶ್ನೆ ಮಾಡುತ್ತಿರಲಿಲ್ಲ. ಆದರೆ ಸರ್ಕಾರ ರೂಲ್ಸ್ ಅನ್ನೇ ಫ್ರೇಮ್ ಮಾಡಿರಲಿಲ್ಲ. Without any rules, they have issued an order reserving certain seats to certain categories. That is a grave mistake of the Government. ಯಾವುದೇ ಒಂದು ಗೌರ್ನಮೆಂಟ್ ರೂಲ್ಸ್ ಇಲ್ಲದೆ ಬೇಕಾಬಿಟ್ಟಿಯಾಗಿ ಅವರಿಗೆ ಬೇಕಾದಂತೆ ರಿಸರ್ವೇಷನ್ ಮಾಡಿಕೊಳ್ಳುವ ಕೆಲಸವನ್ನು ಯಾರೂ ಕೂಡ ಮಾಡಿರಲಿಲ್ಲ. ಆದರೆ ಇವರು ಇವತ್ತು ಅದನ್ನು ಮಾಡಿದ್ದಾರೆ. ಕೋರ್ಟ್‌ನ ತೀರ್ಪಿನ ವಿರುದ್ಧವಾಗಿ ಡಿವಿಷನ್ ಬೆಂಚ್‌ಗೆ ಅಪೀಲ್ ಹೋಗಿರತಕ್ಕದ್ದು ಸರ್ಕಾರದ ಎರಡನೇ ತಪ್ಪು. ಯಾವುದಾದರೂ ಒಂದು ಗೈಡ್‌ಲೈನ್ಸ್ ರೂಪಿಸಿ ಅದರ ಪ್ರಕಾರ ಮೀಸಲಾತಿ ಮಾಡುತ್ತೇವೆ ಎಂದು ಸರ್ಕಾರ ಹೇಳಬೇಕಾಗಿತ್ತು. ಮೊದಲನೆಯದಾಗಿ, ಸರ್ಕಾರ ತೆಗೆದುಕೊಂಡ ತೀರ್ಮಾನವೇ ಮೊದಲನೆಯ ತಪ್ಪು. ರೂಲ್ಸ್ ಇಲ್ಲದೇ ರಿಸರ್ವೇಷನ್ ಮಾಡಿದ್ದೇ ಎರಡನೆಯ ತಪ್ಪು ಆಗಿದೆ.

ಅಧ್ಯಕ್ಷರು: ಸುಮಾರು 20 ಪಾರ್ಟಿಗಳು ಹಾಕಿದ್ದಾರೆ. ನೀವೇನು ಹೇಳುತ್ತಿದ್ದೀರಿ. ಅದು ಇನ್ನೂ ಆರ್ಗ್ಯುಮೆಂಟ್ ಸ್ಟೇಜ್‌ನಲ್ಲೇ ಇದೆ.

ಶ್ರೀ ಬಿ.ಸೋಮಶೇಖರ್: ಸರ್ಕಾರ ತಾವು ತಪ್ಪು ಮಾಡಿಬಿಟ್ಟು ಡಿವಿಷನ್ ಬೆಂಚ್‌ಗೆ ಅಪೀಲ್ ಹಾಕಿದ್ದೇವೆ ಎಂದು ಹೇಳತಕ್ಕದ್ದು ತಪ್ಪು.

ಅಧ್ಯಕ್ಷರು: ನಾವು ಈ ರೀತಿ ಚರ್ಚೆ ಮಾಡುತ್ತಾ ಹೋದರೆ ಇದೇ ಕೋರ್ಟ್ ತರಹ ಆಗಿಬಿಡುತ್ತದೆ. ದಯವಿಟ್ಟು ಆ ವಿಚಾರ ಬೇಡ. ಆ ಬಗ್ಗೆ ಕೋರ್ಟ್ ಡಿಸೈಡ್ ಮಾಡುತ್ತದೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಒಂದರಡು ನಿಮಿಷಗಳ ಕಾಲ ಮಾತನಾಡಲು ದಯವಿಟ್ಟು ಅವಕಾಶ ಕೊಡಿ. ಡಿವಿಷನ್ ಬೆಂಚ್‌ಗೆ ಅಪೀಲ್ ಹಾಕಿರುವುದು ತಪ್ಪು. ಅದಕ್ಕಾಗಿ ಸರ್ಕಾರ ಕ್ಷಮೆ ಕೇಳುವುದಲ್ಲದೆ ಅಪೀಲ್ ಅನ್ನು ವಾಪಸ್ ತೆಗೆದುಕೊಳ್ಳಬೇಕು. ಗೈಡ್‌ಲೈನ್ಸ್‌ನ ಪ್ರಕಾರ ಜನಾವಣೆಯನ್ನು ಮಾಡಬೇಕು. ಎರಡು ತಿಂಗಳಿನಿಂದ ಎಲ್ಲರೂ ಕೂಡ ಕಾಯ್ದುಕೊಂಡು ಕುಳಿತಿದ್ದಾರೆ. ಆ ಕೆಲಸವನ್ನು ಬೇಗನೆ ಮಾಡಬೇಕು.

ಅಧ್ಯಕ್ಷರು: ನಿಮ್ಮ ನಾಯಕರು ಎಲ್ಲಾ ವಿಚಾರಗಳನ್ನು ಆಗಲೇ ಹೇಳಿದ್ದಾರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಡಿ.ಬಿ.ಚಂದ್ರೇಗೌಡ: ಸರ್ಕಾರ ಯಾವ ಅಪರಾಧವನ್ನೂ ಕೂಡ ಮಾಡಿಲ್ಲ. ಕ್ಷಮೆ ಕೇಳಬೇಕಾದಂತಹ ಅಗತ್ಯವಿಲ್ಲ. ಅದೆಲ್ಲಾ ಅವರ ಕಲ್ಪನೆ ಮಾತ್ರ. ಯಾವುದಾದರೂ ಜಡ್ಜ್‌ಮೆಂಟ್ ಬಂದ ತಕ್ಷಣ ಅಪೀಲ್ ಅನ್ನೇ ಹಾಕಬಾರದು ಎನ್ನುವ ವಾದ ಸರಿಯಲ್ಲ.

(ಗೊಂದಲ)

ಅಧ್ಯಕ್ಷರು: ಒಟ್ಟೊಟ್ಟಿಗೆ ಅನೇಕ ಜನರು ಎದ್ದು ಮಾತನಾಡಿದರೆ ಹೇಗೆ?

(ಗೊಂದಲ)

SRI B.SOMASHEKAR: The Government has issued the reservation in the vacuum without following any rules and regulations. That is the mistake.

ಶ್ರೀ ಜಿ.ಎನ್.ಬಚ್ಚೇಗೌಡ: ಇದಕ್ಕೆ ರೂಲ್ಸ್ ಫ್ರೇಮ್ ಮಾಡಿ ಎಂದು ನಾವು ಅವತ್ತು

ಹೇಳಿದಾಗ ಮಾನ್ಯ ಸಂಸದೀಯ ಸಚಿವರು ಅದಕ್ಕೆ ಒಪ್ಪಲಿಲ್ಲ. ಮಾನ್ಯ ಸೋಮಶೇಖರ್‌ರವರು ಈಗ ಪ್ರಸ್ತಾಪ ಮಾಡಿದಂತೆ ನಾವು ಕಳೆದ ಬಾರಿಯೇ ಈ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಿ ರೂಲ್ಸ್ ಅನ್ನು ಫ್ರೇಮ್ ಮಾಡಿ ಎಂದು ಕೇಳಿದ್ದೆವು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪಂಚಾಯಿತಿ ಚುನಾವಣೆಗೆ ರೂಲ್ಸ್ ಫ್ರೇಮ್ ಮಾಡಿತ್ತು. ಅದಕ್ಕೆ ಯಾವ ರೀತಿಯಾದ ಅಬ್ಜೆಕ್ಷನ್ ಬಂದಿರಲಿಲ್ಲ. ಅದರಂತೆ ಮುನಿಸಿಪಲ್ ಚುನಾವಣೆಗಳಿಗೆ ಸಂಬಂಧಪಟ್ಟಂತೆ ರೂಲ್ಸ್ ಫ್ರೇಮ್ ಮಾಡಿ ಎಂದಾಗ ಇದೇ ಮಾನ್ಯ ಚಂದ್ರೇಗೌಡರು ಆವತ್ತು ಒಪ್ಪಿರಲಿಲ್ಲ. ಅವರೇ ಇವತ್ತು ನಾವು ರೂಲ್ಸ್ ಫ್ರೇಮ್ ಮಾಡಬೇಕಾಗಿತ್ತು ಎಂದು ಹೇಳುತ್ತಿದ್ದಾರೆ. "There was a lapse on our part." ಎಂದು ಅವರೇ ಹೇಳುತ್ತಿದ್ದಾರೆ. So, he is defending his part.

ಶ್ರೀ ಡಿ.ಬಿ.ಚಂದ್ರೇಗೌಡ: ಇವತ್ತು ಅರ್ಜಿ ಕೋರ್ಟ್ ಮುಂದೆ ವಿಚಾರಣೆಗೆ ಬರುತ್ತಿದೆ. ಇವತ್ತು ಜಡ್ಜ್‌ಮೆಂಟ್ ಬರಬಹುದು. ಅದರಲ್ಲಿ ಸರ್ಕಾರಕ್ಕೆ ಏನಾದರೂ ಒಂದು ಮಾರ್ಗದರ್ಶನವನ್ನು ಕೊಡಬಹುದು.

ಶ್ರೀ ಎ.ರಾಮದಾಸ್: ಮಾನ್ಯ ಕಾನೂನು ಮಂತ್ರಿಗಳು ಒಂದು ವಿಚಾರವನ್ನು ಹೇಳಿದರು. ಇವತ್ತು ನಾವು ವ್ಯಾಕ್ಯೂಮ್‌ನಲ್ಲಿ ಇದ್ದೇವೆ. ಮೊದಲನೆಯ ತೀರ್ಪಿನಲ್ಲಿ ಸೆಕ್ಷನ್ 6ನ್ನು ಡಿಲೀಟ್ ಮಾಡಿದ್ದರಿಂದ ಹೀಗಾಯಿತು ಎಂದು. ಸೆಕ್ಷನ್ 6 ಅನ್ನು ಇವತ್ತು ಯಾವುದಕ್ಕೋಸ್ಕರವಾಗಿ ಸ್ಕ್ಯಾಪ್ ಮಾಡಿದ್ದಾರೆಂದರೆ, ಆ ಸೆಕ್ಷನ್ 6ರಲ್ಲಿ ಸರ್ಕಾರ ಯಾವುದೇ ರೀತಿಯಾದಂತಹ.....

ಅಧ್ಯಕ್ಷರು: ಇದನ್ನೆಲ್ಲಾ ಚರ್ಚೆ ಮಾಡಿದರೆ ಸಬ್‌ಜ್ಯುಡೀಸ್ ಆಗುತ್ತದೆ. ಅದಕ್ಕಾಗಿಯೇ ನಾನು ಆಗಲೇ ಚರ್ಚೆಬೇಡ ಎಂದು ಹೇಳಿದ್ದು.

ಶ್ರೀ ಎ.ರಾಮದಾಸ್: ನಾನು ಅದನ್ನು ಆರ್ಗ್ಯೂ ಮಾಡುತ್ತಿಲ್ಲ.....

MR.SPEAKER: You are arguing the merits of the case this is not a court to discuss all those things. ಇಲ್ಲಿ ಬೇಕಾದಷ್ಟು ಲಾಯರ್‌ಗಳು ಮತ್ತು ಅಡ್ವೊಕೇಟ್ಸ್‌ಗಳು ಇದ್ದಾರೆ.

(ಗೊಂದಲ)

ಶ್ರೀ ಎ.ರಾಮದಾಸ್: ಸರ್ಕಾರದ ಈ ರೀತಿಯಾದಂತಹ ಆರ್ಬಿಟ್ರೇಟರಿ ನೇಚರ್ ಅನ್ನು ಅಲ್ಲಿ ರದ್ದು ಮಾಡಿದ್ದಾರೆ ಅಷ್ಟೆ. ನೀವು ರೂಲ್ಸ್ ಅನ್ನು ನಾವು ಫ್ರೇಮ್ ಮಾಡುತ್ತೇವೆ ಎಂಬ ಒಂದೇ ಒಂದು ಮಾತನ್ನು ಹೇಳಿದರೆ ನ್ಯಾಯಾಲಯದಲ್ಲಿ

ಯಾವುದೇ ಸಮಸ್ಯೆಯೂ ಕೂಡ ಇರುವುದಿಲ್ಲ. ದಯವಿಟ್ಟು ಮಾನ್ಯ ಸಚಿವರು ಈ ಸದನವನ್ನು ತಪ್ಪು ದಾರಿಗೆ ಎಳೆಯಬಾರದು. ಸರ್ಕಾರ ತೆಗೆದುಕೊಂಡಿರತಕ್ಕಂಥ ಅರ್ಬಿಟ್ರೇಟರಿ ನೇಚರ್ ಅನ್ನು ಮಾತ್ರ ಕೋರ್ಟ್ ರದ್ದು ಮಾಡಿದೆ ಎಂದು ನಾನು ಇಲ್ಲಿ ಸ್ಪಷ್ಟಪಡಿಸುತ್ತಿದ್ದೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮದಾಸ್‌ರವರೇ ಮೊದಲು ಕೋರ್ಟ್‌ಗೆ ಹೋದವರಾಗಿದ್ದಾರೆ. ಜಡ್ಜ್‌ಮೆಂಟ್ ಬಂದದ್ದು ಅವರ ವಿರುದ್ಧವೇ. ಆದ್ದರಿಂದ ಯಾರು ಇಲ್ಲಿ ಆರ್ಬಿಟ್ರರಿ ಎನ್ನುವ ತೀರ್ಮಾನವನ್ನು ನಾನು ಸದನಕ್ಕೇ ಬಿಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: 100-150 ಇನ್‌ಸ್ಟಿಟ್ಯೂಷನ್ಸ್.....

ಅಧ್ಯಕ್ಷರು: ಕೋರ್ಟ್‌ನಲ್ಲಿ ಆರ್ಗ್ಯೂಮೆಂಟ್ ಮಾಡುವಂತಾದ್ದನ್ನು ನಾವು ಇಲ್ಲಿ ಮಾಡುವುದಕ್ಕಾಗುತ್ತದೆಯೇ?

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ನಾನು ಕೋರ್ಟ್ ಹೇಳಿದ್ದನ್ನು ಹೇಳುತ್ತಿಲ್ಲ. ಸರ್ಕಾರದವರು ಕೋರ್ಟ್‌ನಲ್ಲಿ ಸಿಂಗಲ್ ಬೆಂಚ್ ಏನು ಆರ್ಡರ್ ಮಾಡಿದೆಯೋ ಅದನ್ನು ಸ್ಟೇ ಮಾಡಿ ಎಂದು ಕೋರಿ ಅಪೀಲ್ ಹೋಗಿದ್ದಾರೆ. ಶೂನ್ಯಕ್ಕೋಸ್ಕರ ಇವರು ಹೋಗಿಲ್ಲ. ಹೊಸದಾಗಿ ಏನು ಮಾಡಬೇಕೆಂದು ಇವರು ಕೋರ್ಟಿನ ಗೈಡ್‌ಲೈನ್ಸ್ ಅನ್ನು ಕೇಳುತ್ತಿಲ್ಲ. ಇವರೇನು ಮ್ಯಾನುಪಲೇಷನ್ ಮಾಡಿದ್ದಾರೋ ಅದಕ್ಕೆ ಕೋರ್ಟಿನಿಂದ ಇವರಿಗೆ ಕವರೇಜ್ ಸಿಗಬೇಕೆಂದು ಹೊರಟಿದ್ದಾರೆ.....

ಅಧ್ಯಕ್ಷರು: ಆ ವಿಷಯ ಮುಕ್ತಾಯವಾಗಿದೆ. ಅದನ್ನು ಇಲ್ಲಿಗೇ ಬಿಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ದಯವಿಟ್ಟು ಮೇಲ್ಮನವಿಯನ್ನು ವಾಪಸ್ ತೆಗೆದುಕೊಳ್ಳಿ ಎಂದು ನಾನು ಈ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ನೀವು ಮಾಡುತ್ತಿರುವುದು ಸರಿಯಲ್ಲ. ನೀವು ಕೇವಲ ಕೆಲವು ಜನಗಳಿಗೆ ಅನುಕೂಲ ಮಾಡಿಕೊಳ್ಳಲಿಕ್ಕಾಗಿ ಇವೆಲ್ಲಾ ಸಂಚು ಮಾಡುತ್ತಿದ್ದೀರಿ. ಇದನ್ನು ನಾವು ತೀವ್ರವಾಗಿ ಪ್ರತಿಭಟನೆ ಮಾಡುತ್ತೇವೆ.

SRI D.B.CHANDRE GOWDA: The matter is being argued this morning.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಿಮ್ಮ ಆರ್ಗ್ಯೂಮೆಂಟ್ ಏನು?

ಅಧ್ಯಕ್ಷರು: ಕೋರ್ಟ್‌ನಲ್ಲಿ ವಾದ ಮಾಡುವುದನ್ನು ಇಲ್ಲಿ ಹೇಳುವುದಕ್ಕಾಗುತ್ತದೆಯೇ?

ಅದರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡುವುದಕ್ಕಾಗುತ್ತದೆಯೇ?

ಶ್ರೀ ಎಸ್.ಸುರೇಶ್‌ಕುಮಾರ್: ಸಬ್ ಸೆಕ್ಷನ್ 6 ಅನ್ನು ಕೋರ್ಟ್ ರದ್ದು ಮಾಡಿದ್ದರಿಂದ ಶೂನ್ಯ ಉಂಟಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಸರ್ಕಾರ ಏನೊಂದು ತಪ್ಪು ಮಾಡಿತ್ತೋ ಅದನ್ನು ಸರಿಮಾಡಿಕೊಳ್ಳುವುದಕ್ಕೆ ಅದಕ್ಕೆ ಅವಕಾಶ ಇತ್ತು. ಆದರೆ ಸರ್ಕಾರ ತನ್ನ ತಪ್ಪನ್ನು ಸರಿಮಾಡಿಕೊಳ್ಳಲಿಲ್ಲ. ಅದರ ಬದಲಿಗೆ ಆ ತಪ್ಪನ್ನು ಮುಚ್ಚಿಟ್ಟುಕೊಳ್ಳಲು ಹೋಗುತ್ತಿದ್ದೀರಿ. ಇನ್ನೊಂದು ದೊಡ್ಡ ಶೂನ್ಯಕ್ಕೆ ನೀವು ಹೋಗುತ್ತಿದ್ದೀರಿ. ಒಂದು ವೇಳೆ ಕೋರ್ಟ್‌ನಲ್ಲಿ ಸ್ಟೇ ಕೊಡಲಿಲ್ಲವೆಂದರೆ ಆಗ ನೀವು ಏನು ಮಾಡುತ್ತೀರಿ?

ಅಧ್ಯಕ್ಷರು: ಇದೆಲ್ಲಾ ಚರ್ಚೆ ಬೇಡ. ಈ ವಿಷಯ ಇಲ್ಲಿಗೇ ಮುಕ್ತಾಯವಾಗಿದೆ. ಮಾನ್ಯ ಸದಾನಂದಗೌಡರೇ, ತಮ್ಮ ವಿಷಯ ಪ್ರಸ್ತಾಪಿಸಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಈ ಸಮಾಜದ ಮತ್ತು ಜನತಂತ್ರದ ವಿರೋಧಿ ನೀತಿಯನ್ನು ಸರ್ಕಾರ ಅನುಸರಿಸುತ್ತಿದೆ. ಇದು ಮೀಸಲಾತಿಗೆ ಮಾಡಿರತಕ್ಕಂಥ ಅಪಚಾರವಾಗಿದೆ. ಇದನ್ನು ನಾವು ವಿರೋಧ ಮಾಡಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಪಿ.ಜಿ.ಆರ್.ಸಿಂಧ್ಯಾರವರ ನೇತೃತ್ವದಲ್ಲಿ ಜನತಾದಳ(ಯು) ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು: ಮಾನ್ಯ ಸದಾನಂದಗೌಡರೇ, ತಾವು ತಮ್ಮ ವಿಷಯ ಪ್ರಸ್ತಾಪಿಸಿ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ವಾಕೌಟ್ ಮಾಡುತ್ತಿರುವುದು ಕೋರ್ಟಿನ ತೀರ್ಪಿನ ವಿರುದ್ಧವಾಗಿದೆ. ವಾಕೌಟ್ ಮಾಡುತ್ತಿರುವುದು ಕೋರ್ಟಿನ ಕಂಟೆಂಪ್ಟ್ ಆದಂತಾಗಿದೆ.

ಅಧ್ಯಕ್ಷರು: ಕೋರ್ಟ್‌ನಲ್ಲಿ ವಾದ ಮಾಡಿದಂತೆ ನಾವು ಇಲ್ಲಿ ಮಾಡುವುದಕ್ಕಾಗುತ್ತದೆಯೇ? ಮಾನ್ಯ ರಾಮದಾಸ್‌ರವರೇ, ಈ ವಿಷಯದ ಚರ್ಚೆ ಮುಕ್ತಾಯವಾಗಿದೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸದಾನಂದಗೌಡರವರೇ, ತಮ್ಮ ವಿಷಯ ಪ್ರಸ್ತಾಪಿಸಿ.

(ಗೊಂದಲ)

ಅಧ್ಯಕ್ಷರು: ನಾನು ಕರೆದದ್ದು ಮಾನ್ಯ ಸದಾನಂದಗೌಡರು ಕೇಳಿಸಿಕೊಳ್ಳುತ್ತಿಲ್ಲ.

ಅವರು ಯಾರೋಡನೆಯೋ ಮಾತನಾಡುತ್ತಿದ್ದಾರೆ. ಆದ್ದರಿಂದ ಮಾನ್ಯ ಶ್ರೀಕಂಠಯ್ಯನವರೇ, ತಾವು ಬರಗಾಲದ ಮೇಲಿನ ಚರ್ಚೆ ಈಗ ಉತ್ತರ ಕೊಡಲು ಪ್ರಾರಂಭಿಸಿ ಬಿಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇಲ್ಲಿ ಸರ್ಕಾರ ತಪ್ಪು ಮಾಡಿದೆ.

ಅಧ್ಯಕ್ಷರು: ಶೆಟ್ಟರ್‌ರವರೇ, ಆ ವಿಷಯ ಮುಕ್ತಾಯಗೊಂಡಿದೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಇವತ್ತು ಯಾರು ಜನ ಪ್ರತಿನಿಧಿಗಳು ಆರಿಸಿ ಬಂದಿದ್ದಾರೋ ಅವರ ಹಕ್ಕನ್ನು ಮೊಟಕುಗೊಳಿಸುವ ಮತ್ತು ಪ್ರಜಾತಂತ್ರ ವ್ಯವಸ್ಥೆಗೆ ಧಕ್ಕೆ ತರುವಂತಹ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ. ಇದನ್ನು ನಾವು ಪ್ರೊಟಿಸ್ಟ್ ಮಾಡುತ್ತೇವೆ. ಇವತ್ತು ಸರ್ಕಾರ ಈ ರೀತಿ ಮಾಡಿರುವುದರಿಂದ ಜನಪ್ರತಿನಿಧಿಗಳು ಅಧಿಕಾರದಿಂದ ವಂಚಿತರಾಗಿದ್ದಾರೆ. ಎರಡು ತಿಂಗಳಿನಿಂದ ಅವರಿಗೆ ಅಧಿಕಾರ ಸಿಕ್ಕಿಲ್ಲ. ಸರ್ಕಾರ ತಾನು ಸಲ್ಲಿಸಿರುವ ಅಫೀಲ್ ಅನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು. ಸರ್ಕಾರ ತಾನು ಎಲ್ಲಿ ತಪ್ಪು ಮಾಡಿದೆಯೋ ಅದನ್ನು ಸರಿಪಡಿಸಿಕೊಳ್ಳಬೇಕು. ಆದರೆ ಸರ್ಕಾರ ಆ ರೀತಿ ನಡೆದುಕೊಳ್ಳುತ್ತಿಲ್ಲ. ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರ ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಎ.ಆರ್.ಕೃಷ್ಣಮೂರ್ತಿ: ಸರ್ಕಾರ ಈ ರೀತಿ ಹಟ ಮಾಡುವುದು ಒಳ್ಳೆಯದಲ್ಲ. ಸರ್ಕಾರದ ನಿಲುವನ್ನು ಪ್ರತಿಭಟಿಸಿ ನಮ್ಮ ಪಕ್ಷದವರೂ ಸಹಾ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಜನತಾದಳ (ಎಸ್)ನ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ಇದರಿಂದ ಇವರಿಗೆ ಜನತಂತ್ರದ ಬಗ್ಗೆ ಎಷ್ಟರಮಟ್ಟಗೆ ಗೌರವ ಇದೆ ಎಂಬುದು ಗೊತ್ತಾಗುತ್ತಿದೆ.

ಶ್ರೀ ಡಿ.ಕೆ.ಶಿವಕುಮಾರ್: ಮುನಿಸಿಪಾಲಿಟಿಗಳ ಮತ್ತು ಕಾರ್ಪೊರೇಷನ್‌ಗಳ

ಚುನಾವಣೆಯಲ್ಲಿ ಸೋತು ಮರ್ಯಾದೆ ಕಳೆದುಕೊಂಡು ಅವರು ಈ ರೀತಿ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ರಾಮದಾಸ್‌ರವರೇ, ಮೊದಲು ಕೋರ್ಟ್‌ಗೆ ಹೋಗಿದ್ದು, ಅವರು ಕೋರ್ಟ್‌ನಲ್ಲೂ ಸೋತರು, ಚುನಾವಣೆಯಲ್ಲೂ ಸೋತರು. ಈಗ ಸದನದಿಂದಲೂ ವಾಕೌಟ್ ಮಾಡಿ ಹೋಗುತ್ತಿದ್ದಾರೆ.

ಶ್ರೀ ಎ.ಕೃಷ್ಣಪ್ಪ: ಚುನಾವಣೆಯಲ್ಲಿ ಜನ ಅವರನ್ನು ಔಟ್ ಮಾಡಿದ್ದಾರೆ. ಆದ್ದರಿಂದ ಅವರು ಇಲ್ಲೂ ಸಹಾ ಔಟ್ ಆಗಿದ್ದಾರೆ ಅಷ್ಟೇ.

ಶ್ರೀ ಡಿ.ಪಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು: ಮಾನ್ಯ ಸದಾನಂದಗೌಡರವರೇ ಮತ್ತು ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೇ, ಇಬ್ಬರೂ ತಮ್ಮ ತಮ್ಮ ವಿಷಯಗಳನ್ನು ಪ್ರಸ್ತಾಪಿಸಲು ನಾನು ನಾಳೆ ಅವಕಾಶ ಮಾಡಿಕೊಡುತ್ತೇನೆ. ತಾವು ಪ್ರಸ್ತಾಪಿಸಬೇಕೆಂದಿರುವ ವಿಷಯಗಳು ಅಂತಹ ತುರ್ತು ವಿಷಯಲ್ಲ. ಮಾನ್ಯ ಶ್ರೀಕಂಠಯ್ಯನವರೇ, ತಾವು ದಯವಿಟ್ಟು ಉತ್ತರ ಕೊಡುವುದನ್ನು ಪ್ರಾರಂಭಿಸಿ.

ಅಧ್ಯಕ್ಷರು: ಶ್ರೀಕಂಠಯ್ಯನವರೆ, ಮೊದಲು ನೀವು ಉತ್ತರ ಕೊಡಲು ಪ್ರಾರಂಭ ಮಾಡಿ.